ಮತ್ತೆಂದಿಗೂ ಅವಳು ತಾನು ಸಾಕುಮಗುವೆಂಬ ವಿಚಾರ ಎತ್ತಿರಲಿಲ್ಲ. ಆದರೀಗ, ಏಕಾಏಕಿ ಅದೇ ವಿಚಾರವನ್ನು ಕೆದಕಿ ಹೂಂಕರಿಸುತ್ತಿದ್ದ ಅವಳ ಪರಿ ಬೇರೆಯದೇ ಎನಿಸಿತು. ಮಮ್ಮಿಯ ದೂರದ ಸಂಬಂಧಿಕಳಾಗಿದ್ದ, ರೋಸಮ್ಮ ಎಂಬ ತನ್ನ ತಾಯಿಯಯ ಬಗ್ಗೆಯಾಗಲೀ, ಅವಳ ಗಂಡನ ಬಗ್ಗೆಯಾಗಲೀ ಇವನಿಗೆ ಸರಿಯಾಗಿ ತಿಳಿದಿರಲಿಲ್ಲ, ಅವಳು ಬಾಣಂತಿ ಸನ್ನಿಯುಂಟಾಗಿ ಸತ್ತು ಹೋಗಿದ್ದಳು ಎಂಬುದಷ್ಟೇ ಅವನಿಗೆ ತಿಳಿದಿದ್ದುದು. ಅದನ್ನೂ ಮೀರಿದ ವಿಚಾರಗಳು ಮುಖ್ಯವೆನಿಸಿರಲೇ ಇಲ್ಲ. ಆದರೆ, ಇಂದು ಹೊತ್ತಲ್ಲದ ಹೊತ್ತಲ್ಲಿ ತನ್ನೆದುರು ಬಂದಿದ್ದ ಈ ಅನಗತ್ಯ ಸತ್ಯವನ್ನು ಹೇಗೆ ನಿಭಾಯಿಸುವುದೋ ತಿಳಿಯದೇ ತೊಳಲಿದ ಫಿಲಿಪನಿಗೆ ತನ್ನ ಮನೆಯ ಗರಂ ಮಸಾಲ, ಬಂಗುಡೆ ಸಾರು, ಗುಜ್ಜೆ ಸುಕ್ಕೆ, ಪ್ಲಂ ಕೇಕುಗಳವೇ ಮೊದಲಾದ ಪರಿಮಳಗಳ ನಡುವೆ ರೋಸಮ್ಮಳ ಅಜ್ಞಾತ ಸುಗಂಧವೊಂದು ನುಸುಳಿದಂತಾಗಿ ಕಸಿವಿಸಿಯಾಯಿತು.

ಲ್ಯಾನ್ಸ್‌ಡೌರ್ನ್ ರಸ್ತೆಯು ಹೊಸೂರು ರಸ್ತೆಯನ್ನು ಸೇರುವೆಡೆಯಲ್ಲಿ ಬಲಕ್ಕೆ ಹೊರಳಿ, ಕೊಂಚ ದೂರ ಸಾಗಿ ಬಲಭಾಗದಲ್ಲಿ ಗೋಚರವಾಗುವ ಕ್ರೈಸ್ತರ ಸ್ಮಶಾನದೊಳಗೆ ಬೇಸಿಗೆಯ ಆ ಮಧ್ಯಾಹ್ನ ಗೋರಿಗಳಿಗೆಲ್ಲ ಬಿಸಿಲಿನ ಸ್ನಾನವಾಗುತ್ತಿತ್ತು. ಕಾಂಪೌಂಡಿನ ಅಂಚಿನಲ್ಲಿರುವ ಗೋರಿಗಳ ಹೆಸರುಗಳನ್ನೂ ಓದುತ್ತಾ ಮುಂದುವರೆಯುತ್ತಿದ್ದ ಫಿಲಿಪನ ಹಿಂದೆ ಕಾಲೆಳೆದುಕೊಂಡು ಸಾಗುತ್ತಿದ್ದ ಸುಮೀ, ತಿಳಿ ಹಳದಿ ಕುರ್ತಾದಲ್ಲಿ ಬಿಸಿಲಿನ ತುಣುಕಿನಂತೆ ಕಾಣುತ್ತಿದ್ದಳು. ಅವನ ಜೊತೆ ಹರಟೆ ಹೊಡೆಯಲು ಪ್ರಯತ್ನಿಸಿ ಬೇಸರವಾಗಿ, ಅಲ್ಲಿದ್ದ ಪಾಚಿ ಬೆಳೆದಿದ್ದ ಗೋರಿಯೊಂದರ ಮೇಲೆ ಕುಳಿತುಕೊಂಡಳು. ಮುಂದಿನವರೆಗೆ ಹೋಗಿದ್ದ ಫಿಲಿಪ, ಇವಳು ಹಿಂದೆಯೇ ಉಳಿದ್ದದ್ದನ್ನು ಗಮನಿಸಿ ಬಂದು ಪಕ್ಕ ಕುಳಿತುಕೊಂಡ. ಸ್ವಲ್ಪ ಸುಮ್ಮನಿದ್ದು, 'ಈ ಸರ್ತಿಯಾದರೂ ಒಪ್ಪಿಸಬೇಕಿತ್ತು ನಿನ್ನ ಮನೆಯವರನ್ನು! ಮನೆಯಲ್ಲಿ ನೆಪ ಹೇಳಿ ಸಾಕಾಗಿದೆ', ಎಂದಳು. ಇವನಿಗೆ ಏನೆನ್ನಬೇಕೆಂದು ತಿಳಿಯಲಿಲ್ಲ. ಗಿಡ್ಡ ನೀಲಿ ಜೀನ್ಸು ತೊಟ್ಟ ಕಾಲುಗಳ ಮೇಲೆ ಕಡುಗಂದು ಹ್ಯಾಂಡ್ ಬ್ಯಾಗನ್ನಿಟ್ಟುಕೊಂಡು ಬಳಲಿದಂತೆ ಮಾತನಾಡುತ್ತಿದ್ದ ಸುಮಿ, ಬರುವ ಖಾತ್ರಿಯಿಲ್ಲದ ಬಸ್ಸು, ಬಂದೇ ಬಂದೀತೆಂಬ ಕೆಚ್ಚಿನಲ್ಲಿ ಗಂಟೆಗಟ್ಟಲೇ ಹಸಿವು ನಿದ್ರೆ ದಣಿವುಗಳನ್ನೂ ಲೆಕ್ಕಿಸದೇ ಒಬ್ಬಂಟಿ ನಿಲ್ದಾಣದಲ್ಲಿ ಮತ್ತಷ್ಟು ಒಬ್ಬಂಟಿಯಾಗಿ ಕಾಯುತ್ತ ಕುಳಿತವಳಂತೆ ಕಂಡಳು.

ರೋಸಮ್ಮಳ ಪೂರ್ತಿ ಹೆಸರಾಗಲೀ, ಅವಳನ್ನು ಎಲ್ಲಿ ಮಣ್ಣು ಮಾಡಿದ್ದಾರೆ ಎಂಬುದಾಗಲೀ, ಮತ್ತಾವುದೇ ವಿವರವಾಗಲೀ ಒಂದೂ ಗೊತ್ತಿಲ್ಲದೇ, ಅದನ್ನೆಲ್ಲ ಮನೆಯಲ್ಲಿ ಕೇಳುವ ಮನಸ್ಸೂ ಆಗದೇ ಒಂದು ಅಂದಾಜಿನಲ್ಲಿ ಶಾಂತಿನಗರದ ಈ ಸ್ಮಾಶಾನಕ್ಕೆ ಬಂದವನಿಗೆ ನೂರಾರು ಸಾಲುಗಳಲ್ಲಿ ಹರಡಿಕೊಂಡಿದ್ದ ಸಾವಿರಾರು ಗೋರಿಗಳ ನಡುವೆ ಅಂಚೆಲ್ಲ ಮಾಸಿ ಹರಿದು ನಡುವಿನ ಪದಗಳಷ್ಟೇ ಉಳಿದಿದ್ದ ಹಾಳೆಯೊಂದರಲ್ಲಿದ್ದಷ್ಟೇ ವಿವರಗಳೊಂದಿಗೆ ರೋಸಮ್ಮಳನ್ನು ಹುಡುಕುವುದು ಸಾಧ್ಯವಿಲ್ಲದ ಮಾತೆಂಬ ಅರಿವು ಬಂದ ಕೂಡಲೇ ಆಗಿತ್ತು. ಸ್ವಲ್ಪ ಹೊತ್ತಿಗೇ, ರೋಸಿ, ರೋಸ್, ರೋಸಿ ಮೇರಿ, ರೋಸಮ್ಮ ಎಂಬ ಹೆಸರಿನ ಫಲಕಗಳಿದ್ದ ಹಲವಾರು ಗೋರಿಗಳು ಸಿಕ್ಕವು, ಅವುಗಳಲ್ಲಿ ಎಷ್ಟೋ ಗೋರಿಗಳಡಿಯಲ್ಲಿ ಮಲಗಿದ್ದವರು ಇವನು ಹುಟ್ಟಿದ ವರ್ಷವೇ ತೀರಿಕೊಂಡಿದ್ದರು. ಹುಟ್ಟಿದ ಮತ್ತು ಸತ್ತ ಇಸವಿಗಳು ನಮೂದಾಗಿರದ ರೋಸಮ್ಮಂದಿರೂ ಇದ್ದರು. 'ಕೆಲವೇ ಕಾಲ ನಮ್ಮೊಡನಿದ್ದು ಬದುಕು ಬದಲಿಸಿದ' ಒಂದು ವರ್ಷದ ರೋಸಿ, 'ಸದಾ ಆಶೀರ್ವದಿಸುತ್ತಿರು'ವ ತೊಂಬತ್ತೆರಡ ರೋಸಿ ಮೇರಿಯಮ್ಮ, 'ಪ್ರಭುವಿನಲ್ಲಿ ಲೀನಳಾದ ದೇವತೆ' ಯಾಗಿದ್ದ ನಲವತ್ತಾರರ ಡೆಲ್ಲಾ ರೋಸಿಯರ ಜೊತೆಗೆ, ಹೆಸರನ್ನಷ್ಟೇ ಕೆತ್ತಿಸಿಕೊಂಡಿದ್ದ ರೋಸಲಿನ, ರೋಸ್ ಜೇನ್, ರೋಸ್ ಡಿಮೆಲ್ಲೋರೆಲ್ಲರ ನಡುವೆ ತನ್ನ ಅಜ್ಞಾತ ತಾಯಿಯನ್ನು ಹುಡುಕುವ ಕೆಲಸ ನಿಷ್ಫಲವಲ್ಲದೇ ಇನ್ನೇನಾಗಲು ಸಾಧ್ಯವಿತ್ತು?

ಬಿಸಿಲಿನಲ್ಲಿ ಕುಳಿತು ಮುಖ ಕೆಂಪಗಾಗಿದ್ದ ಸುಮಿ, ಮೈ ಬೆವೆತದ್ದರಿಂದ, ಕೂದಲನ್ನು ಮೇಲಕ್ಕೆ ಬಾಚಿ ತುರುಬಿನಂತೆ ಕಟ್ಟಿಕೊಂಡಿದ್ದಳು. ಮಧ್ಯಾಹ್ನವು ಸಂಜೆಯ ತೆಕ್ಕೆ ಸೇರುವಾಗ ಅವಳೊಂದಿಗೆ ಸ್ಕೂಟರಿನಲ್ಲಿ ಹೊರಟ ಫಿಲಿಪನಿಗೂ ದಣಿವಾಗಿತ್ತು. ಸ್ಕೂಟರ್ ಓಡಿಸುತ್ತಿದ್ದವಳ ಮೈಯಿಂದ ಬರುತ್ತಿದ್ದ ಬೆವರು ಬೆರೆತ ಮಂದವಾದ ಪರಿಮಳ ಹಿತವೆನಿಸಿತು. ಅವಳ ಉದ್ದನೇ ಕತ್ತಿನ ಸುತ್ತಲಿನ ಸಣ್ಣ ಸಣ್ಣ ಗೆರೆಗಳು ಸಂಜೆಯ ತಿಳಿಬೆಳಕಿನಲ್ಲಿ ಮುದ್ದಾಗಿ ಕಾಣಿಸಿದುವು. ಅವನನ್ನು ಮನೆಯಿಂದ ಸ್ವಲ್ಪ ದೂರ ಇಳಿಸಿ 'ಸೋಮವಾರ ಹನ್ನೆರಡಕ್ಕೆ ಫ್ಲೈಟು' ಎಂದಳು. ಅವಳು ದಿಲ್ಲಿಯ ತನ್ನ ಇನ್ಸ್ಟಿಟ್ಯೂಟಿಗೆ ಹೊರಡುವ ದಿನ ಇನ್ನೇನು ಬಂತು ಎಂಬುದು ನೆನಪಾಗಿ ಫಿಲಿಪನಿಗೆ ನೋವಾಯಿತು. ಹೊರಡುವುದಕ್ಕೆ ಮುಂಚಿನ ಕೆಲವು ದಿನಗಳನ್ನಾದರೂ ಅವಳಿಗಿಷ್ಟವಾಗುವಂತೆ ಕಳೆಯಲಾಗಲೇ ಇಲ್ಲ ಎನಿಸಿ, 'ಸಾರಿ ಸುಮೀ' ಎನ್ನಹೊರಟವನು ತಡೆದು, 'ಐ ವಿಲ್ ಮಿಸ್ ಯು' ಎಂದ. 'ಅಯ್ಯೋ ನಾಳೆಯ ನಂತರ ಮಿಸ್ ಮಾಡಿಕೊ, ನಾಳೆ ಸಿಗೋದಿದೆ ಇನ್ನು' ಎಂದು ನಕ್ಕಳು. 'ಮಧ್ಯಾಹ್ನ ಊಟಕ್ಕೆ ಸಿಗೋಣ! ಸಿಮಿಟ್ರಿ ಹತ್ತಿರ, ಕೆಫೆ ಎಟ್ ಸಾಂಚಿಯಲ್ಲಿ, ಮೈ ಟ್ರೀಟ್' ಎನ್ನುವಷ್ಟರಲ್ಲಿ ಗಾಡಿ ಶುರು ಮಾಡಿ ಮುಂದೆ ಸಾಗಿದ್ದವಳು 'ಸರಿ' ಎಂಬಂತೆ ಕೈ ಎತ್ತಿದಳು.

ಸಂಜೆಯ ಬಾಗಿನ ಹೊತ್ತಿಗೆ ಮನೆಗೆ ಮರಳಿದಾಗ, ಗೇಟಿನ ಕಂಬಕ್ಕೊರಗಿ ಅಪ್ಪ ನಿಂತಿದ್ದರು. ಹತ್ತಿರ ಬಂದಾಗ ತಂಬಾಕಿನ ಘಾಟನ್ನೂ ಗಾಳಿಯಲ್ಲಿತ್ತು. ಮಮ್ಮಿ ವರಾಂಡಾದ ಮೆಟ್ಟಿಲಿನ ಮೇಲೆ ಕಾಲು ಚಾಚಿ ನೈಟೀಯನ್ನು ತೊಟ್ಟಿಲಿನಂತೆ ಮಾಡಿಕೊಂಡು ಅದರಲ್ಲಿ ತಾನು ಊಟ ಹಾಕುವ ಬೆಕ್ಕಿನ ಮರಿಯನ್ನು ಮಲಗಿಸಿಕೊಂಡು ಆಟವಾಡಿಸುತ್ತಿದ್ದಳು. ಕರ್‍ರಗಿನ ಉಣ್ಣೆಯ ಉಂಡೆಯಂತಹ ಆ ಮರಿ ಅವಳ ಹಳದಿ ಸ್ವೆಟರಿನ ತೋಳುಗಳನ್ನು ಕಚ್ಚುತ್ತಾ ಆಡುತ್ತಿತ್ತು. ಸ್ವಲ್ಪ ದೂರದಲ್ಲಿ ಅದರ ತಾಯಿ, ಕಪ್ಪು ಬಿಳುಪಿನ ದೊಡ್ಡ ಬೆಕ್ಕು ಹಿಂಗಾಲುಗಳ ಮೇಲೆ ಕುಳಿತು ಮುಂಗಾಲುಗಳನ್ನು ನೆಕ್ಕಿಕೊಳ್ಳುತ್ತಿತ್ತು. ಇವನು ಬಂದ ಸದ್ದಿಗೆ ಬೆಕ್ಕುಗಳು ಓಡಿಹೋದವು. ಮಮ್ಮಿ ಎದ್ದು, 'ಇವ ಬಂದ, ಕಾಫಿಗಿಡ್ತೇನೆ' ಎನ್ನುತ್ತಾ ಒಳಹೋದಳು. ಮೊದಲೆಲ್ಲ, ವರ್ಷಗಟ್ಟಲೆಯಿಂದ ಒಂದೇ ರೀತಿಯಲ್ಲಿ ಶುರುವಾಗಿ ಒಂದೇ ಬಗೆಯಲ್ಲಿ ಮುಗಿಯುವ ದೈನಿಕದ ಲಯಕ್ಕೆ ಶೃತಿಗೊಂಡಿರುವ ಮಮ್ಮಿ ಡ್ಯಾಡಿಯದ್ದು ಅತ್ಯಂತ ನೀರಸ ದಾಂಪತ್ಯ ಎನಿಸುತ್ತಿತ್ತು ಫಿಲಿಪನಿಗೆ. ಒಮ್ಮೊಮ್ಮೆ ಅವರಿಬ್ಬರೂ ಒಂದೇ ಬಸ್ಸಿನಲ್ಲಿ ಸುದೀರ್ಘ ಪ್ರಯಾಣ ಹೊರಟ ಸಹಪ್ರಯಾಣಿಕರಂತೆ ಕಾಣುತ್ತಿದ್ದರು. ಆದರೆ, ಸುಮಿ ಹತ್ತಿರಾದಾಗಿನಿಂದ ಆ ನೀರಸ ಯಾನಕ್ಕೂ ಮಧ್ಯಾಹ್ನದ ಸಣ್ಣ ನಿದ್ರೆಗಿರುವ ಚೆಲುವಿದೆ ಎನಿಸತೊಡಗಿತ್ತು. ತಿಂಗಳುಗಟ್ಟಲೇ ಓಡಿಸದೇ ಬಿಟ್ಟ ಬೈಕಿನ ಮೇಲೆ ಅಪ್ಪನಿಗೆ ಎಂದಾದರೊಮ್ಮೆ ಪ್ರೀತಿ ಬಂದು ಅದರ ಅಂಗಾಂಗಳನ್ನೆಲ್ಲ ತಿಕ್ಕುತ್ತಾ ಕುಳಿತಾಗ ಅಮ್ಮ ಆ ವಾಹನ ಸ್ನಾನವನ್ನು ನೋಡುತ್ತಾ ಮನೆಯ ಮೆಟ್ಟಿಲ ಮೇಲೆ ಕೆಸುವಿನೆಲೆ ಗಂಟುಕಟ್ಟುತ್ತಾ ಕೂರುತ್ತಿದ್ದಳು. ಇಳಿಸಂಜೆಗೆ ಅಪ್ಪ ಗೇಟಿನ ಒಂದು ಬದಿಯಲ್ಲಿ ಸಿಗರೇಟು ಸೇದುತ್ತಾ ನಿಂತರೆ, ಮತ್ತೊಂದು ಬದಿಯಲ್ಲಿ ಮಮ್ಮಿ ಗೇಟಿನ ಮೇಲೆ ಹಬ್ಬಿಸಿದ್ದ ಚೀಟಿಹೂವಿನ ಬಳ್ಳಿ ಒಪ್ಪ ಮಾಡುತ್ತಲೋ, ಗಿಡಗಳಿಗೆ ನೀರು ಹಾಕುತ್ತಲೂ ಇರುತ್ತಿದ್ದಳು. ಅವರವರ ಏಕಾಂತಕ್ಕೆ ಎಡೆಮಾಡಿಕೊಡುತ್ತಲೇ ಪರಸ್ಪರರ ಜತೆಗಿರುವ ಅವರಿಬ್ಬರ ನಡುವೆ ಇರುವಂತಹದ್ದೇ ಹಗೂರವಾದ ಎಳೆಯೊಂದು ತನ್ನ ಮತ್ತು ಸುಮಿಯ ನಡುವೆಯೂ ಎಂದುಕೊಂಡ ಫಿಲಿಪನಿಗೆ, ತನಗೆ ಅತ್ಯಂತ ಪ್ರಿಯವಾದ ಶನಿವಾರ ಮಧ್ಯಾಹ್ನದ ನಿದ್ರೆಯನ್ನೂ ಬಿಟ್ಟು, ತನ್ನ ಜೊತೆಗೆ ಸ್ಮಶಾನಕ್ಕೆ ಬಂದು ಧೂಳು, ಬಿಸುಲಿನಲ್ಲಿ ಗೋರಿಗಳ ನಡುವೆ ತನ್ನ ಹುಡುಕಾಟ ಮುಗಿಯುವುದನ್ನೇ ಮೌನವಾಗಿ ಕಾಯುತ್ತ ಕೂತಿದ್ದ ಸುಮಿಯ ನೆನಪಾಯಿತು.

ರಾತ್ರಿ ಊಟದ ನಂತರ, ಎಲೆಯಡಿಕೆ ಹಾಕಿಕೊಂಡು ಬಂದ ಮಮ್ಮಿ ಒಂದಷ್ಟು ಮಾತನಾಡುತ್ತ ಇವನೊಟ್ಟಿಗೆ ಕುಳಿತಳು. ಮಾತು ಮುಗಿದರೂ, 'ಮತ್ತೆ, ಮತ್ತೆ' ಎನ್ನುತ್ತಿದ್ದವಳ ಮೇಲೆ ಫಿಲಿಪನಿಗೆ ಅಕ್ಕರೆ ಮೂಡಿತು. 'ಏಂತದಾ ಹೇಳ್ಬೇಕಂತ ಇದ್ದಿ, ಅಲ್ವ ಮಮ್ಮಿ, ಎಂತ ನನ್ನ ಹತ್ರ ನಾಚಿಕೆಯಾ ನಿಂಗೆ' ಎಂದ. ಕದ್ದು ಸಿಕ್ಕಿಬಿದ್ದವಳಂತೆ 'ಹೆಹೆ, ನೀ ಬಾರಿ ಹುಷಾರು, ಹೇಗೆ ಕಂಡು ಹಿಡಿದೇ ನೋಡು' ಎಂದು ಕ್ಷಣಕಾಲ ಸುಮ್ಮನಿದ್ದು, 'ಮೊನ್ನೆ ತಂಗಿ ಹೇಳಿದನ್ನ ನೀನು ಮರೆತಿಲ್ಲ ಅಲ್ವೆನಾ' ಎಂದಳು. ಮತ್ತೊಂದಷ್ಟು ಹೊತ್ತು ಬಿಟ್ಟು, 'ದೊಡ್ಡ ವಿಷಯ ಎಂತ ಇಲ್ಲವಾ. ಅವಳು ಗಂಡನೊಂದಿಗೆ ಮಸ್ಕತ್ತಿಗೆ ಹೋಗಿ ಬಿಸಿನೆಸ್ ಮಾಡ್ತಾ ಅಂತ ಇದ್ದದ್ದು ಗೊತ್ತಲ್ಲ? ಅವನಿಗೆ ಎಂತದಾ ಸಾಲವಂತೆ. ಅವನ ಮನೆಯದ್ದು ಗೊತ್ತಲ್ಲ, ಖಾಲಿ ಕೈ! ಅವಳ ನಾವು ಕೊಟ್ಟ ಪಾಲಿನದ್ದನ್ನೂ ಗಿರವಿಯಿಟ್ಟಾಗಿದೆ. ಈಗ ಪೀಣ್ಯದ ಸೈಟನ್ನ ಮಾರಿ ಕೊಡೀ, ಸಾಲ ತೀರ್ತದೆ, ಊರಿಗೆ ಹೋಗ್ಲಿಕ್ಕೆ ಆಗ್ತದೆ ಅಂತ ಒಂದೇ ಹಠ ಅವಳದ್ದು' ಎಂದಳು. ಸ್ವಲ್ಪ ವಿರಮಿಸಿ 'ಅದಕ್ಕೆ ನಿನ್ನ ಅಪ್ಪ, 'ಅದನ್ನ ಕ್ರಯಕ್ಕೆ ಕೊಡ್ಲಿಕ್ಕೆ, ಫಿಲಿಯನ್ನೂ ಒಂದು